ಟಿ.ಆರ್. ರವೀಂದ್ರ, ಬೆಂಗಳೂರು
*ಒಂದು ದಿನದ ಮಟ್ಟಿಗೆ ದೇವರು ತನ್ನ ಸರ್ವಶಕ್ತಿಯನ್ನು ಕೊಟ್ಟರೆ ನೀವೇನು ಮಾಡುವಿರಿ?*



ಪಾರ್ವತಿಯ ಸಹಾಯದಿಂದ ನೂರಾರು ಗಣ- ನಾಯಕರನ್ನು ನಿರ್ಮಿಸಿ ಎಲ್ಲೆಡೆ ನೇಮಿಸಿಬಿಡುತ್ತೇನೆ.

ಎಸ್. ಲಕ್ಷ್ಮೀನರಸಿಂಹ, ಚಾಮರಾಜನಗರ
*ರಾಜಕಾರಣದಲ್ಲಿ ಅಣ್ಣ- ತಮ್ಮರಿದ್ದಂತೆ ಎನ್ನುವ ಮಾತನ್ನು ನಾವು ಹೇಗೆ ತೆಗೆದುಕೊಳ್ಳಬೇಕು ರಾಂ?*
ವಾಲಿ- ಸುಗ್ರೀವರಿದ್ದಂತೆ ಎಂದು!

ಪೇಂಟರ್ ಪಾಪು, ಸಂತೇಮರಹಳ್ಳಿ
*ಬೆಗ್ಗರ್ಸ್ 'ಅಮ್ಮ ತಾಯಿ' ಎನ್ನುವರೇ ಹೊರತು 'ಅಪ್ಪ ತಂದೆ' ಎಂದು ಕರೆಯುವುದಿಲ್ಲ. ಏಕೆ?*
ಆ 'ಅಪ್ಪ ತಂದೆ'ಯೂ ಈ 'ಅಮ್ಮ ತಾಯಿ'ಯನ್ನೇ ಬೇಡುವನೆಂದು ತಿಳಿದಿರುವುದರಿಂದ.

ಫಾಲನೇತ್ರ ಸಜ್ಜನ, ಶಿರಸಿ
*ಹುಟ್ಟು ಏಕಿದೆ?*
ಹುಟ್ಟೆಲ್ಲ ಅಡ್ಗಿಬಿಟ್ಟಿತ್ತೀನಿ ಅನ್ನುವವರ ಮಾತನ್ನು ಸುಳ್ಳು ಮಾಡಲು.

ಎಸ್. ಭಾನುಮತಿ, ಬೆಂಗಳೂರು
*ತಪ್ಪು ಮಾಡುವವರೇ ಇಲ್ಲದಿದ್ದರೆ ಈ ಪ್ರಪಂಚ ಹೇಗಿರುತ್ತಿತ್ತು?*



ಹೊಸ ದಾರಿಗಳ ಆವಿಷ್ಕಾರವೇ ಆಗದೆ ಪೂರ್ವಕಾಲದಲ್ಲೇ ಸ್ಥಗಿತವಾಗುತ್ತಿತ್ತು.

ನಳಿನಿ ಆರ್. ಮಾಗಲ್, ಸಕಲೇಶಪುರ
*ಮನುಷ್ಯ ಎಂತಹ ಕೆಟ್ಟ ಕೆಲಸ ಮಾಡಿದರೂ ಪರವಾಯಿಲ್ಲ. ಕಂತ್ರಿ ಅಂತ ಕರೆಯೋದು ನಾಯಿಗಳನ್ನ ಮಾತ್ರ.* ಇದ್ಯಾವ *ಸೀಮೆ ನ್ಯಾಯ?*
'ಹ್ಞ! ನಮ್ಮನ್ನು ಅದಕ್ಕಿಂತ ಕೆಟ್ಟ ಪದವಾದ ಮಂತ್ರಿ ಎನ್ನದಿರುವುದರಿಂದ ನಮಗೆ ಸಂತಸವೇ' ಎಂದಿತೊಂದು ಶ್ವಾನ.

ಕೆ.ಎನ್. ನಾರಾಯಣರೆಡ್ಡಿ, ಕೆ.ಜಿ.ಎಫ್.
*ಹೆಂಡತಿಯೊಬ್ಬಳು ಮನೆಯೊಳಗಿದ್ದರೆ ನನಗದು ಕೋಟಿ ರೂಪಾಯಿ ಎಂದರು ಕೆ.ಎಸ್.ನ. ನಿಮ್ಮ ಅನಿಸಿಕೆ?*
ಅದು ಅಂದಿಗೆ ಸರಿ; ಈ ಫ್ಲಿಪ್‌ಕಾರ್ಟ್ ಯುಗದಲ್ಲಿ ಹೆಂಡತಿಯಿರುವೆಡೆ ನೆಟ್ವರ್ಕ್ ಇರದಿರೆ ನನಗದು ಕೋಟಿ ರುಪಾಯಿ!

ಸುಂದರ್, ಬೆಂಗಳೂರು
*ಅಂದು 'ಸರ್ವಂ ಬ್ರಹ್ಮಮಯಂ'* ಇಂದು*?*
ಬ್ರಹ್ಮಾಂಡಂ ಸರ್ವರ್ ಮಯಂ.

ಬಾ.ರಂ. ಸುರೇಶ್, ಶಿವಮೊಗ್ಗ
*ಹೆಂಡತಿ ಊರಿಗೆ ಹೋದರೆ ಬೇಸರ. ಮನೆಯಲ್ಲಿದ್ದರೆ ಕಿರಿಕಿರಿ. ಪರಿಹಾರವೆಂತು ಶಿವಾ?*
ಸಿಂಪಲ್; ತವರಿಗೆ ಕಳುಹಿಸಿ ವಿಡಿಯೋ ಚಾಟ್ ಮಾಡಿ.

ಎಂ.ಎಸ್. ಗುರುರಾಜಾಚಾರು, ಬಳ್ಳಾರಿ
*ವಾಹನದ ಹಿಂದೆ ಹೋದರೆ ಧೂಳು. ಹುಡುಗಿಯ ಹಿಂದೆ ಹೋದರೆ ಗೋಳು.* ಮಂತ್ರಿಯ *ಹಿಂದೆ ಹೋದರೆ?*
ಆರೋಗ್ಯ, ನೆಮ್ಮದಿ, ಆಸ್ತಿ, ಎಲ್ಲವೂ ಬೋಳೋ ಬೋಳು.

ಎಸ್.ಜಿ. ಕರನಂದಿ, ಹುನಗುಂದ
*ಅಂದಾಜು ಅರವತ್ನಾಲ್ಕು ವಿದ್ಯೆಗಳಲ್ಲಿ ತಾವು ಯಾವ ವಿದ್ಯೆಯಲ್ಲಿ ಪ್ರಭುತ್ವ ಪಡೆದಿದ್ದೀರಿ?*
ದಶಕಗಳಿಂದ ವಾಕ್ ಮಾಡುತ್ತಿರುವುದರಿಂದ – ವಾಕ್ ಸಿದ್ಧಿ.

ಮಾಲತಿ ರಾಜು, ಬೆಂಗಳೂರು
*ನನ್ನದು 'ತೆರೆದಿಟ್ಟ ಪುಸ್ತಕ' ಅಂತಾರಲ್ಲ, ಇದರರ್ಥ?*
ಅಲ್ಲಲ್ಲಿ ತೆರೆ, ಅಲ್ಲಲ್ಲಿ ದಿಟ್ಟತನ ಇದೆ ಎಂದು.

ಆರತಿ ಘಟಿಕಾರ್, ದುಬೈ
*ಎಲ್ಲರಿಗೂ ಶಾಂತಿ ಬೇಕು. ಆದರೆ ಶಾಂತಿಗೆ ಯಾರು ಬೇಕು ರಾಮ್?*
ಯಾವ ಶಾಂತಿ? ಡಿಸ್ಕೋ ಶಾಂತಿಗಾದರೆ ಬಹಳ ಜನ ಬೇಕಾದವರಿದ್ದರು.

ಜೆ. ಪ್ರದೀಪಕುಮಾರ್, ಹೂವಿನಹಡಗಲಿ
*ಅಂತರ್ಜಲಕ್ಕೂ, ಅಂತರ್ಜಾಲಕ್ಕೂ ಏನು ವ್ಯತ್ಯಾಸ?*
ಶುದ್ಧಿಗೊಂದು; ಸುದ್ದಿಗೊಂದು.

## ಬಹುಮಾನಿತ ಪ್ರಶ್ನೆ

ಆರ್. ಮಧುಸೂದನ್, ಹಾಸನ
*ಮದುವೆಯ ನಂತರ ಗಂಡನಿಗೆ ಕಿವುಡಾದರೆ ವರವೋ, ಶಾಪವೋ?*
ಶಾಪವೇ; ಕಿವುಡಾದುದರಿಂದ ಬರೆದುಕೊಟ್ಟಿದ್ದನ್ನೆಲ್ಲ ಮರೆತೆನೆಂದು ಸಬೂಬು ಹೇಳದೆ ತರಲೇಬೇಕಾಗುತ್ತದೆ.

ಎಂ.ಎಸ್. ಧರ್ಮೇಂದ್ರ, ದೊಡ್ಡಮಗ್ಗೆ
*ಅತ್ತೆಗೂ, ಕತ್ತೆಗೂ ಏನು ವ್ಯತ್ಯಾಸ?*
ಒಂದು ಜನರೇಶನ್ ವ್ಯತ್ಯಾಸ. ಅತ್ತೆಯ ಮಗನೇ ಕತ್ತೆ ಎಂದಳಾ ಕತ್ತೆಚಾಕರಿ ಮಾಡಿಸುವ ಮಾಡ್ರನ್ ಮಡದಿ.

ಮುಕುಂದ ಹೆರಕಲ್ಲ, ಕಲಬುರ್ಗಿ
*ಕೆಲವು ರೌಡಿಗಳು ಹಣೆಯ ಮೇಲೆ ಢಾಳಾಗಿ ಕುಂಕುಮ ಹಚ್ಚಿಕೊಂಡಿರುತ್ತಾರಲ್ಲ, ಅವರೂ ದೇವರಿಗೆ ಅಂಜುತ್ತಾರಾ?*
ಊಹೂಂ. ಅವರನ್ನು ಕಂಡ ಇತರರು ಥಕ್ಕನೆ ನಿಲ್ಲಬೇಕೆಂದು ಸೂಚಿಸುವ ಸ್ಟಾಪ್ ಸಿಗ್ನಲ್ ಅದು.

ಜಾಕೋಬ್ ಡಿಸೋಜ, ಕುರುವಳ್ಳಿ
*ಒಂಟಿ ಸೀನು ಅಪಶಕುನವಂತೆ?*




ನಿಜ. ಒಳ್ಳೆ ಕಲೆಕ್ಷನ್ ಆಗಬೇಕಾದರೆ ಒಂಟಿ ಸೀನಿಗಿಂತ ಡ್ಯುಯೆಟ್ ಸೀನೇ ಶ್ರೇಷ್ಠ.

ಬಿ.ಎಂ. ಶಿವಲಿಂಗೇಗೌಡ, ಬೇವಿನಹಳ್ಳಿ
*ನಾರಿ ಸ್ವರ್ಗಕ್ಕೆ ದಾರಿ ನಿಜ. ನಾರಿ ನರಕಕ್ಕೂ ದಾರಿಯಂತೆ. ನಿಜವೆ...?*
ನಿಜ. ಅರಿಯೆಂದರೆ ಶತ್ರು, ತಿಳಿ ಎಂದರ್ಥಗಳು. ನ+ಅರಿ=ನಾರಿ; ಶತ್ರುಹೀನತೆಯೇ ಸ್ವರ್ಗ; ತಿಳಿಗೇಡಿತನವೇ ನರಕ.

ಬೆಳ್ಳಾವೆ ರಮೇಶ್, ಬೆಂಗಳೂರು
*ದೂರವಾಣಿ ಕರೆಗೂ, ಕಾಲನ ಕರೆಗೂ ವ್ಯತ್ಯಾಸವೇನು?*
ಒಂದು ಮೊದಲು ಕರೆ, ನಂತರ ಲೆಕ್ಕ ಚುಕ್ತಾ; ಇನ್ನೊಂದು ಮೊದಲು ಎಲ್ಲ ಲೆಕ್ಕ ಚುಕ್ತಾ; ನಂತರ ಕರೆ.

■ **ರಾಮ್**